ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
# ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಸಿ3(7)ಪ್ರಾ.ಶಿ. ವರ್ಗ-07/2017-18

ದಿನಾಂಕ: 15/08/2018

**: ಜ್ಞಾಪನ :**

ವಿಷಯ:- 2017-18 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಡುವ ಬಗ್ಗೆ ಪರಿಷ್ಕೃತ ವೇಳಾಪಟ್ಟಿ- ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿ ಕ್ರಮಗಳು, ಕಡ್ಡಾಯ ವರ್ಗಾವಣೆ ಹಾಗು ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳ ಕುರಿತಂತೆ ವೇಳಾಪಟ್ಟಿ-ಕೆಲವು ದಿನಾಂಕಗಳ ಪರಿಷ್ಕರಣೆ ಕುರಿತು.

ಉಲ್ಲೇಖ:- ಜ್ಞಾಪನ ಸಮ ಸಂಖ್ಯೆ: ಸಿ3(7)ಪ್ರಾ.ಶಿ. ವರ್ಗ-07/2017-18 ದಿನಾಂಕ: 06/08/2018

---*****---

ವಿಷಯದನ್ವಯ ಈಗಾಗಲೇ ಪ್ರಕ್ರಿಯೆಗಳು ಜಾರಿಯಲ್ಲಿದ್ದು, ಶಿಕ್ಷಕರ ಮಾಹಿತಿ ತಂತ್ರಾಂಶ (ಟಿ.ಡಿ.ಎಸ್)ದಲ್ಲಿ ಕೆಲವು ಶಿಕ್ಷಕರ ಮಾಹಿತಿಗಳು ಸಕಾಲದಲ್ಲಿ ಇಂದೀಕರಣವಾಗದೇ ಇರುವುದರಿಂದ ಮುಂದಿನ ಪ್ರಕ್ರಿಯೆಗಳನ್ನು ಅಧಿಸೂಚಿಸಲಾದ ದಿನಾಂಕಗಳಲ್ಲಿ ನಡೆಸುವುದರಿಂದ ಅಂತಹ ಶಿಕ್ಷಕರುಗಳಿಗೆ ತೊಂದರೆಯಾಗಬಹುದಾದ ಸಾಧ್ಯತೆಗಳನ್ನು ಗಮನಿಸಿ ಬೇಡಿಕೆಯಂತೆ ತಂತ್ರಾಂಶದಲ್ಲಿ ಅಂತಹ ಎಲ್ಲ ತಿದ್ದುಪಡಿಗಳನ್ನು ಅಳವಡಿಸಲು ಅವಧಿಯನ್ನು ಪರಿಷ್ಕರಿಸಿದೆ. ಅನುಗುಣವಾಗಿ ಕೆಳಗಿನಂತೆ ಕೆಲವು ದಿನಾಂಕಗಳಲ್ಲಿ ಅಲ್ಪ ಬದಲಾವಣೆಗಳನ್ನು ಮಾಡಲಾಗಿದೆ. ಉಳಿದಂತೆ ಇತರೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಶಿಕ್ಷಕರ ಮಾಹಿತಿ ತಂತ್ರಾಂಶದಲ್ಲಿ ತಿದ್ದುಪಡಿಗಳನ್ನು ಅಳವಡಿಸಲು ಆಯಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಮತ್ತು ಉಪನಿರ್ದೇಶಕರುಗಳಿಗೆ ಮಾತ್ರ ತಂತ್ರಾಂಶವನ್ನು ತೆರೆಯಲಾಗಿದ್ದು ಶಿಕ್ಷಕರು ನೇರವಾಗಿ ತಿದ್ದುಪಡಿಗಳನ್ನು ಮಾಡಲು ಅವಕಾಶವಿರುವುದಿಲ್ಲ. ಈ ಕುರಿತಂತೆ ವ್ಯಾಪ್ತಿಯ ಶಿಕ್ಷಕರುಗಳಿಗೆ ವ್ಯಾಪಕವಾಗಿ ಪ್ರಚುರಪಡಿಸಪಡಿಸತಕ್ಕದ್ದು ಮತ್ತು ನಿಗಧಿತ ಕಾಲಾವಧಿಯೊಳಗೆ ಶೇ 100 ರಷ್ಟು ಕರಾರುವಕ್ಕಾಗಿ ಎಲ್ಲಾ ಮಾಹಿತಿಗಳನ್ನು ಟಿ.ಡಿ.ಎಸ್ ನಲ್ಲಿ ಅಳವಡಿಸತಕ್ಕದ್ದು. ಈ ಪ್ರಕ್ರಿಯೆಯಲ್ಲಿ ಹೆಚ್ಚಿನ ಮಾರ್ಗದರ್ಶನಕ್ಕೆ ಈ ಕಛೇರಿಯ ಇ-ಗೌವರ್‌ನೆನ್ಸ್ ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಅವಧಿ ನಂತರದಲ್ಲಿ ಯಾವುದೇ ಲೋಪಗಳಿಗೆ ಆಯಾ ಕ್ಷೇತ್ರಶಿಕ್ಷಣಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಈಗಾಗಲೇ ತಿಳಿಸಿರುವಂತೆ ಸಿ.ಸಿ.ಎ ನಿಯಮಗಳನ್ನು ಜಾರಿಗೊಳಿಸಲಾಗುವುದು.

ಇದೇ ಸಂಬಂಧ ವರ್ಗಾವಣಾ ತಂತ್ರಾಂಶದಲ್ಲಿ ತಿದ್ದುಪಡಿಗಳನ್ನು ಅಳವಡಿಸುವ ಕ್ರಮ ಮತ್ತು ಈ ಕುರಿತಾಗಿ ತಾಂತ್ರಿಕ ಸೂಚನೆಗಳನ್ನು ನೀಡಲಾಗಿದೆ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರುಗಳು ಹಾಗೂ ಸಂಬಂಧಿತ ಎಲ್ಲಾ ಅಧೀನಾಧಿಕಾರಿಗಳು ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಗಮನಿಸತಕ್ಕದ್ದು.

| ಉಲ್ಲೇಖಿತ ಜ್ಞಾಪನದ ಕೋಷ್ಟಕದ ಕ್ರಮ ಸಂಖ್ಯೆ (ಪುಟ 8.9 ಮತ್ತು 10) | ವಿವರ | ಈಗಾಗಲೇ ನಿಗಧಿಪಡಿಪಡಿಸಿದ್ದ ದಿನಾಂಕಗಳು | ಪರಿಷ್ಕರಿಸಿದ ದಿನಾಂಕಗಳು |
|---|---|---|---|
| 2 | ಟಿಡಿಎಸ್ ನಲ್ಲಿ ಶಿಕ್ಷಕರ ಎಲ್ಲ ವಿವರಗಳನ್ನು ಇಂದೀಕರಿಸುವುದು ಮತ್ತು ಸರ್ಕಾರದ ಆದೇಶ ಇಡಿ 173 ಇಟಿಆರ್ 2007 ದಿನಾಂಕ 14/11/2007ರನುಸಾರ ಶಾಲೆಗಳ ಝೋನ್ (zone) ನಮೂದುಗಳು ಸರಿಯಾಗಿದೆಯೇ ಎಂಬ ಬಗ್ಗೆ ಪರಿಶೀಲನೆ ಮತ್ತು ಸರಿಪಡಿಸುವಿಕೆ ಮತ್ತು ಅಗತ್ಯ | 08/08/2018ರೊಳಗೆ | ದಿನಾಂಕ: 15/08/2018 ರಿಂದ 17/08/2018ರ ಸಂಜೆ 5.30 ಗಂಟೆಯ ವರೆಗೆ(ಕೋರಿಕೆಯ ಮೇರೆಗೆ ಟಿ.ಡಿ.ಎಸ್ ನಲ್ಲಿ ತಿದ್ದುಪಡಿ ಮಾಡಲು ಅವಧಿಯನ್ನು ವಿಸ್ತರಿಸಿದೆ) |

